ಆಕೆ ಮತ್ತೆ ಫೋನ್ ನನ್ನ ಕೈಗೆ ಕೊಡುತ್ತ, 'ಮನೆಗೆ ಫೋನ್ ಮಾಡಿ ಮಾತಾಡ್ತಾ ಇರಿ. ಬರ್ತೀನಿ' ಅಂದು ಮೊದಲು ಅಡುಗೆಮನೆಯೊಳಗೆ ಹೋಗಿ ನಂತರ ತನ್ನ ರೂಮೊಳಗೆ ಹೊರಟುಹೋದಳು.

ನಾನು ಫೋನ್‌ನಲ್ಲಿ ಮಾತಾಡದೆ ಮನೆಯನ್ನು ಪರಿಶೀಲಿಸುತ್ತ ಕುಳಿತುಬಿಟ್ಟೆ.

ಟ್ರಿಬಲ್ ಬೆಡ್‌ರೂಮ್ ಫ್ಲ್ಯಾಟ್ ಅದು. ಫೈನಾಗಿ ವುಡ್ ವರ್ಕ್ ಮಾಡಿಸಿದ ಅಲ್ಮೇರಾಗಳು, ಡಾಂಬಿಕವಾಗಿ ಕಾಣಿಸದಿರುವುದನ್ನೇ ವಿಶೇಷತೆಯಾಗಿ ಹೊಂದಿರುವ ಬೆಲೆ ಬಾಳುವ ವಸ್ತುಗಳು, ಮೊಟ್ಟೆಯಾಕಾರದಲ್ಲಿ ಬೆಳ್ಳಗೆ ಮಿರಮಿರ ಹೊಳೆಯುತ್ತಿರುವ ವಾಷ್‌ಬೇಸಿನ್ನುಗಳು...

ಹಾಲಿನ ಗೋಡೆಗಳ ಮೇಲೆ ಮೂರು ನಾಲ್ಕು ಕಡೆ ಚಿನ್ನುನ ಫೋಟೊಗಳು ಬೇರೆ ಬೇರೆ ವಯಸಿನವು ದೊಡ್ಡದಾಗಿ ಲ್ಯಾಮಿನೇಟ್ ಮಾಡಿಸಿ ತೂಗುಹಾಕಲಾಗಿದೆ. ಒಂದು ಫೋಟೊದಲ್ಲಿ ಚಿನ್ನುನ ಜೊತೆಗೆ ಅವನ ಅಪ್ಪ ಅಮ್ಮ ಕೂಡ ಇದ್ದಾರೆ. ಆತ ಚೆನ್ನಾಗಿದ್ದಾನೆ. ಆಕೆಗೆ ಸರಿಸಮನಾಗಿ.

ಆಕೆ ಫ್ರೆಷ್ ಆಗಿ ನೈಟಿಯೊಳಗೆ ತೂರಿಕೊಂಡು ನಿಧಾನವಾಗಿ ಹೊರಗೆ ಬಂದಳು.

'ವ್ಯವಸ್ಥೆ ಆಗ್ತಾ ಇದೆ. ಸ್ವಲ್ಪ ಹೊತ್ತು ವ್ಯವಧಾನದಿಂದಿರಬೇಕು ನೀವು' ಅಂದಳು ನಗುತ್ತ.

ಆಕೆಯನ್ನು ನೋಡುತ್ತಿದ್ದರೆ ಯಾಕೋ ತುಂಬಾ ಸಂತೋಷದಲ್ಲಿರುವಂತೆ ಕಾಣಿಸಿದಳು. ಅದು ಸಂಜೆಯಿಂದ ನಾನು ನೋಡಿದ ಮುಖವಲ್ಲ. ಶ್ಯಾಮಲ ವರ್ಣದಲ್ಲಿ ಕಳಕಳೆಯಾಗಿದ್ದ ಆಕೆಯ ರೂಪ ಆ ಲೈಟ್ ಕಲರಿನ ನೈಟಿಯಲ್ಲಿ ಆಕರ್ಷಣೀಯವಾಗಿತ್ತು.

'ನಿಮ್ಮ ಹಜ್ಬೆಂಡ್ ಇಲ್ವೇನ್ರಿ?' ಅಂದೆ ಆಕೆಗೆ.

'ಅವರು ಇಲ್ಲಿರೋಲ್ಲ. ಅಬ್ರಾಡಲ್ಲಿರ್ತಾರೆ' ಅಂದಳು ಕ್ಲುಪ್ತವಾಗಿ.

ಹಿಂದೆಯೇ ಏನೋ ನೆನಪು ಮಾಡಿಕೊಂಡವಳಂತೆ ಎದ್ದು, ಹ್ಯಾಂಡ್ ಬ್ಯಾಗ್ ಹತ್ತಿರ ಹೋಗಿ ಬ್ಯಾಗಿನೊಳಗಿಂದ ಮತ್ತೆ ಆ ಸಣ್ಣ ಬಾಟಲ್ ತೆಗೆದು ಕಣ್ಣಿಗೆ ಡ್ರಾಪ್ಸ್ ಹಾಕಿಕೊಂಡಳು. ಆಮೇಲೆ ಕಣ್ಣುಗುಡ್ಡೆಗಳನ್ನು ಗುಂಡಗೆ ತಿರುಗಿಸುತ್ತ ಕಣ್ಣೊಳಗಿನ ನೀರನ್ನು ಜಾಗ್ರತೆಯಾಗಿ ಮೂಲೆಗಳಿಗೆ ಸರಿಸಿಕೊಳ್ಳುತ್ತ ನಿಂತಳು.

ಕೆಲಸದ ಹುಡುಗಿ ಬಂದು ಅಲ್ಲಿದ್ದ ಮರದ ಕುರ್ಚಿಗಳಲ್ಲಿ ಒಂದನ್ನು ಭಾರವಾಗಿ ಎಳೆದುಕೊಂಡು ಪಕ್ಕದ ಕೋಣೆಯೊಳಗೆ ತೆಗೆದುಕೊಂಡು ಹೋಗುತ್ತಿರಬೇಕಾದರೆ ಆಕೆ ಹೇಳಿದಳು, 'ಆಕಡೆ ಸಿಟೌಟ್ ಚೆನ್ನಾಗಿರುತ್ತೆ. ಮಳೆ ಬರ್ತಿದೆಯಲ್ಲ. ಹಾಗಾಗಿ ಕೂತ್ಕೊಳ್ಳೋಕಾಗಲ್ಲ. ಅಟ್ಲೀಸ್ಟ್ ಡೋರ್ ಹತ್ತಿರ ಸೆಟ್ಲ್ ಆದ್ರೂ ಹಾಯಾಗಿರುತ್ತೆ ಅಂತ... ನಡೀರಿ' ಅನ್ನುತ್ತ ಎದ್ದಳು.

ಆಕೆ ಹಿಂದೆ ನಾನೂ ಎದ್ದೆ.

ಅಷ್ಟೊತ್ತಿಗಾಗಲೇ ಒಳಗೆ ಮತ್ತೊಂದು ಕುರ್ಚಿ ಒಂದು ಟೀಪಾಯಿ ಇದ್ದವು ಅಲ್ಲಿ. ಬಹುಶಃ ಆಕೆ ದಿನಾಲೂ ಕುಳಿತುಕೊಳ್ಳುತ್ತಿರಬಹುದು. ಇವತ್ತು ಮಾತ್ರ ಗೆಸ್ಟು ಕುರ್ಚಿ ಒಂದು ಹೆಚ್ಚಿಗೆ.

ಸಿಟೌಟ್ ಬಾಗಿಲು ತೆರೆದೇ ಇತ್ತು. ಆ ಕಡೆಯಿಂದ ಬರುತ್ತಿದ್ದ ಗಾಳಿಯು ಮಳೆಗೆ ತೋಯ್ದು ತಣ್ಣಗೆ ದೇಹಗಳನ್ನು ತಾಕುತ್ತಿತ್ತು.

ತುಂತುರು ನಮ್ಮ ಮೇಲೆ ಸಿಡಿಯದಷ್ಟು ದೂರದಲ್ಲಿ ಕುಳಿತುಕೊಂಡೆವು.

'ಒಂದು ಕೇಳ್ತೀನಿ ಏನೂ ಅಂದ್ಕೊಳ್ಳಲ್ಲ ತಾನೆ? ವೈನ್ ಇದೆ. ತಗೋತೀರಾ?' ಅಂದಳಾಕೆ.

'ಬೇಡ. ಅಭ್ಯಾಸ ಇಲ್ಲ.'

'ಏನು? ಡ್ರಿಂಕ್ ಅಭ್ಯಾಸ ಇಲ್ವಾ?'